**ದಿನಾಂಕ 29-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ಶ್ರೀ ಡಿ.ಬಿ.ಎಸ್., ವಕೀಲರಿಂದಃ**

1. ಮೃತ ಶಾಸಪ್ಪ ನನ್ನ ಗಂಡ. ಆತನನ್ನು ನಾನು ಮದುವೆಯಾದ ಬಗ್ಗೆ ದಾಖಲಾತಿ ಇಲ್ಲ, ಸಾಕ್ಷಿ ಆಧಾರ್ ಕಾರ್ಡ್ ಇದೆ ಎನ್ನುತ್ತಾರೆ. ನಾನು 11 ವರ್ಷಗಳ ಹಿಂದೆ ಆತನನ್ನು ಮದುವೆಯಾಗಿದ್ದೆನು. ನಮ್ಮ ಮದುವೆ ನನ್ನ ಗಂಡನ ಮನೆಯಲ್ಲಿ ಕಣಮುಚ್ಚಿನಾಳ್ ಗ್ರಾಮದಲ್ಲಿ ಆಗಿರುತ್ತದೆ. ನನ್ನ ಗಂಡ ಹಾಗೂ ನನ್ನ ಹೆಸರು ಇರುವ ಪಡಿತರ ಚೀಟಿ ಊರಿನಲ್ಲಿ ಇರುತ್ತದೆ. ಸದರಿ ಪಡಿತರ ಚೀಟಿಯಲ್ಲಿ ನನ್ನ ಮಕ್ಕಳ ಹೆಸರು ಇರುವುದಿಲ್ಲ. ಸದರಿ ಪಡಿತರ ಚೀಟಿ ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಮೃತ ಶಾಸಪ್ಪ ನನ್ನ ಗಂಡನಲ್ಲ ಎಂದರೆ ಸರಿಯಲ್ಲ.

2. ನಾನು ಮೃತನ ಜೊತೆ ಉಡುಪಿಯ ಶಾಂತಿನಗರದಲ್ಲಿ ಸ್ವಲ್ಪ ಸಮಯ ವಾಸವಾಗಿದ್ದೆನು. ಅದು ಬಾಡಿಗೆ ಮನೆ ಆಗಿತ್ತು. ಸದರಿ ಬಾಡಿಗೆ ಮನೆಯ ಮಾಲೀಕ ಯಾರು ಎಂದು ನನಗೆ ಗೊತ್ತಿಲ್ಲ. ನಾನು ಸುಮಾರು 1 ರಿಂದ 2 ವರ್ಷ ಉಡುಪಿಯಲ್ಲಿ ವಾಸ ಇದ್ದೆನು. ಸದರಿ ಮನೆ ಬಾಡಿಗೆ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಸಮಯ ನಮ್ಮ ಜೊತೆ ಅರ್ಜಿದಾರ ಸಂಖ್ಯೆ 2 ರಿಂದ 4 ರವರು ಕೂಡ ವಾಸವಿದ್ದರು. ಈ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಾವೇಲ್ಲರೂ ಮೃತನ ಜೊತೆ ಶಾಂತಿನಗರದಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ.

3. ಮೃತ ಕೂಲಿ ಕೆಲಸ ಮಾಡುತ್ತಿದ್ದನು ಎಂದರೆ ಸರಿಯಲ್ಲ, ಸಾಕ್ಷಿ ಕ್ಲೀನಿಂಗ್ ಮತ್ತು ಲೋಡರ್ ಕೆಲಸ ಮಾಡುತ್ತಿದ್ದನು ಎನ್ನುತ್ತಾರೆ. ಆತ ಯಾವ ವಾಹನದಲ್ಲಿ ಕ್ಲೀನರ್ ಅಥವಾ ಲೋಡರ್ ಎಂದು ಕೆಲಸ ಮಾಡುತ್ತಿದ್ದನು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಆತನ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಆತ 3-4 ವರ್ಷಗಳಿಂದ ಸದರಿ ಕೆಲಸಮಾಡುತ್ತಿದ್ದನು. ಆತ ಯಾರ ಬಳಿ ಕೆಲಸ ಸಿಗುತ್ತದೊ ಅಲ್ಲಿ ಹೋಗಿ ಕೆಲಸ

ಮಾಡುತ್ತಿದ್ದನು. ನಾನು ಆತನ ಜೊತೆ ಕೆಲಸಕ್ಕೆ ಹೋಗುತ್ತಿರಲಿಲ್ಲ. ಆತ ಕ್ಲೀನರ್ ಹಾಗೂ ಲೋಡರ್ ಎಂದು ಕೆಲಸಮಾಡುತ್ತಿದ್ದನು ಎಂದು ಈ ಪ್ರಕರಣಕ್ಕಾಗಿ ಪ್ರಥಮವಾಗಿ ಹೇಳುತ್ತಿದ್ದೇನೆ ಎಂದರೆ ಸರಿ.

4. ಅಪಘಾತ ದಿನಾಂಕ 11-10-2016 ರಂದು ಆಗಿರುತ್ತದೆ. ನೀವು ಕಾರ್ಮಿಕ ಪರಿಹಾರ ಕಾಯ್ದೆ ಅಡಿಯಲ್ಲಿ ಬೇರೆ ಅರ್ಜಿ ಸಲ್ಲಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಮೃತ ಶಾಸಪ್ಪ ಹಾಗೂ ನಾನು ಅರ್ಜಿಯಲ್ಲಿ ಕಾಣಿಸಿದ ಮಾಲೀಕರ ನಡುವೆ ಕಾರ್ಮಿಕ ಮಾಲೀಕ ಸಂಬಂಧ ಇತ್ತು, ಇಲ್ಲವೋ ಎಂದರೆ ನನಗೆ ಗೊತ್ತಿಲ್ಲ. ಮೃತ ಟ್ರ್ಯಾಕ್ಟರ್ ನಲ್ಲಿ ಪ್ರಯಾಣಿಕನಾಗಿ ಹೋಗುತ್ತಿದ್ದಾಗ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತ ಹೇಗೆ ಆಗಿರುತ್ತದೆ ಎಂದು ನಿಮಗೆ ಗೊತ್ತಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಯಾವುದೇ ಉತ್ತರ ನೀಡುತ್ತಿಲ್ಲ.

5. ಶ್ರೀಶೈಲ ಎಸ್. ತಳವಾರ್ ಎಂದರೆ ನನ್ನ ಗಂಡನ ಅಣ್ಣ. ಅಪಘಾತ ಸಮಯ ಆತ ಶಾಂತಿನಗರದಲ್ಲಿ ವಾಸ ಮಾಡುತ್ತಿದ್ದನು. ಆತನನ್ನು ಪೊಲೀಸರು ವಿಚಾರಣೆ ಮಾಡಿದ್ದಾರಾ ಇಲ್ಲವಾ ನನಗೆ ಗೊತ್ತಿಲ್ಲ. ಅಪಘಾತ ಬಗ್ಗೆ ಹಾಗೂ ಮೃತನ ಕೆಲಸದ ಬಗ್ಗೆ ಸದರಿ ಶ್ರೀಶೈಲನಿಗೆ ಮಾಹಿತಿ ಇತ್ತು. ಪೊಲೀಸರು ನಡೆಸಿದ ನಿಪಿ.8 ಶವ ತನಿಖಾ ವರದಿಗೆ ನಿಮ್ಮ ತಕರಾರು ಇದೇಯಾ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನನಗೆ ಶಂಕರಪ್ಪ ಸಿದ್ದಪ್ಪ ಬಿರಾದರ್ ಯಾರು ಎಂದು ಗೊತ್ತಿಲ್ಲ. ನಾನು ಅಪಘಾತವನ್ನು ನೋಡಿರುವುದಿಲ್ಲ. ಅಪಘಾತವನ್ನು ನೋಡಿದ ಬಸವನನ್ನು ಸಾಕ್ಷಿಯಾಗಿ ಕರೆಯಿಸಬಹುದು. ಸದರಿ ಬಸವ ನನ್ನ ಸಂಬಂಧಿಕನಲ್ಲ. ಆತ ನನ್ನ ಗಂಡನ ಜೊತೆ ಕೆಲಸಮಾಡುತ್ತಿದ್ದರು. ಆತ ಕೂಡ ಲೋಡರ್ ಹಾಗೂ ಕ್ಲೀನರ್ ಎಂದು ಕೆಲಸಮಾಡುತ್ತಿದ್ದರು. ಸದರಿ ಬಸವನನ್ನು ಪೊಲೀಸರು ವಿಚಾರಣೆ ಮಾಡಿರುವುದು ನನಗೆ ಗೊತ್ತಿಲ್ಲ. ಪೊಲೀಸ್ ದಾಖಲಾತಿಯಲ್ಲಿ ಸದರಿ ಬಸವನ ಹೆಸರು ಕಾಣಿಸುತ್ತದೆಯೇ ಎಂದರೆ ನನಗೆ ಗೊತ್ತಿಲ್ಲ.

6. ಮೃತ ಶಾಸಪ್ಪ ಎಷ್ಟು ವಿದ್ಯಾಭ್ಯಾಸ ಮಾಡಿದ್ದನು ಎಂದು ನನಗೆ ಗೊತ್ತಿಲ್ಲ. ಮೃತ ಪಡುವ ಸಮಯ ಶಾಸಪ್ಪನಿಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಟ್ರಾಕ್ಟರ್ ಗಾಡಿಯನ್ನು ನೋಡಿರುತ್ತೇನೆ. ಗದ್ದೆ ಉಳುಮೆಗೂ ಅದನ್ನು ಉಪಯೋಗಿಸುತ್ತಾರೆ. ಅದರಲ್ಲಿ ಚಾಲಕನಿಗೆ ಮಾತ್ರ ಆಸನದ ವ್ಯವಸ್ಥೆ ಇದೆ ಎಂದರೆ ಸರಿ. ಮೃತ ಟ್ರಾಕ್ಟರಿನ ಮಡ್ ಗಾರ್ಡ್ ನಲ್ಲಿ ಕುಳಿತು ಪ್ರಯಾಣಿಸುತ್ತಿರುವಾಗ ಆಯಾ ತಪ್ಪಿ ಬಿದ್ದು ಮೃತ ಪಟ್ಟಿರುತ್ತಾನೆ ಎಂದರೆ ಸಾಕ್ಷಿ ಚಾಲಕನ ಪಕ್ಕ ಕುಳಿತುಕೊಂಡಿದ್ದನು ಎನ್ನುತ್ತಾರೆ. ಅಪಘಾತ ರಸ್ತೆಯಲ್ಲಿ ಆಗಿರುತ್ತದೆ ಗದ್ದೆಯಲ್ಲಿ ಅಲ್ಲ. ಅಪಘಾತ ಸಮಯ ಸದರಿ ಟ್ರಾಕ್ಟರಿನಲ್ಲಿ ಲೋಡ್ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಅಪಘಾತ ಸಮಯ ಸದರಿ ಟ್ರಾಕ್ಟರ್ ಎಲ್ಲಿಂದ ಎಲ್ಲಿಗೆ ಪ್ರಯಾಣಿಸುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಮೃತ ಚಾಲಕನ ಪಕ್ಕ ಕುಳಿತುಕೊಂಡಿದ್ದನು ಎಂದು ಪ್ರಥಮ ಬಾರಿಗೆ ಈ ಪ್ರಕರಣಕೋಸ್ಕರ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡುತ್ತಿಲ್ಲ. ನಾನು ಶಾಲೆಗೆ ಹೋಗಿಲ್ಲ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಮೃತ ಚಾಲಕನ ಪಕ್ಕದಲ್ಲಿ ಕುಳಿತುಕೊಂಡಿದ್ದನು ಎಂದು ಕಾಣಿಸುವುದಿಲ್ಲ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡುತ್ತಿಲ್ಲ.

7. ಅಪಘಾತವನ್ನು ನೋಡಿದವರು ಪೊಲೀಸರಿಗೆ ದೂರು ನೀಡಿದ್ದಾರೆ ಎಂದರೆ ಸಾಕ್ಷಿ ಮಲ್ಲಪ್ಪ ಎನ್ನುವವರು ದೂರು ನೀಡಿದ್ದಾರೆ ಎನ್ನುತ್ತಾರೆ. ಆತ ನನಗೆ ಪರಿಚಿತ. ಆತನಿಗೆ ಅಪಘಾತದ ಬಗ್ಗೆ ನನಗಿಂತ ಜಾಸ್ತಿ ಗೊತ್ತು ಎಂದರೆ ಸರಿ. ಸದರಿ ಮಲ್ಲಪ್ಪ ನಿಪಿ.2 ರಲ್ಲಿ ಮೃತ ಟ್ರಾಕ್ಟರಿನ ಚಕ್ರದ ಮೇಲಿನ ಪ್ಲಾಟ್ ಫಾರಂ ನಲ್ಲಿ ಕುಳಿತುಕೊಂಡಿದ್ದಾಗ ಆಯಾ ತಪ್ಪಿ ಬಿದ್ದು ಮೃತ ಪಟ್ಟಿದ್ದಾನೆ ಎಂದು ನಮೂದಿಸಿದ್ದಾನೆ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡುತ್ತಿಲ್ಲ. ನಾನು ಸಾಧಿಸುವಂತೆ ಮೃತ ಅಪಘಾತದಲ್ಲಿ ಮೃತ ಪಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಕ್ಲೀನರ್ ಹಾಗೂ ಲೋಡರ್ ಎಂದು ಕೆಲಸಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ ಟ್ರಾಕ್ಟರಿನ ಪ್ರಯಾಣಿಕನಾಗಿ ಚಲಿಸುತ್ತಿದ್ದಾಗ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರಿನ ಮಾಲೀಕರಿಗೂ ಹಾಗೂ ಮೃತನಿಗೂ ಯಾವುದೇ ಮಾಲೀಕ ಹಾಗೂ ಕಾರ್ಮಿಕ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೃತ

ಪಡುವ ಸಮಯ ಶಾಸಪ್ಪನಿಗೆ ನಾನು ಅರ್ಜಿಯಲ್ಲಿ ಕಾಣಿಸಿದಕ್ಕಿಂತ ಹೆಚ್ಚಿನ ವಯಸ್ಸು ಆಗಿತ್ತು ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡುತ್ತಿಲ್ಲ.

8. ಮೃತನಿಗೆ ಎಷ್ಟು ಸಂಪಾದನೆ ಇತ್ತು ಎಂದರೆ ದಿನಕ್ಕೆ ರೂ.500/- ದುಡಿಯುತ್ತಿದ್ದರು. ಅವರಿಗೆ ತಿಂಗಳಲ್ಲಿ 10 ದಿನ ಮಾತ್ರ ಕೆಲಸಸಿಗುತ್ತಿತ್ತು ಎಂದರೆ ಸರಿಯಲ್ಲ. ದಿನಾಲು ಕೆಲಸಕ್ಕೆ ಹೋಗುತ್ತಿದ್ದರು. ನಾನು ಹೇಳುವಷ್ಟು ಮೃತನಿಗೆ ಸಂಪಾದನೆ ಇರಲಿಲ್ಲ ಹಾಗೂ ನನಗೆ ಆತನ ಬಗ್ಗೆ ಯಾವುದೇ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರಿನಲ್ಲಿ ಪ್ರಯಾಣ ಮಾಡಲು ಅವಕಾಶ ಇಲ್ಲದಿದ್ದರೂ ಮೃತನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವೈದ್ಯಕೀಯಾ ಖರ್ಚು, ಶವ ಸಂಸ್ಕಾರಕ್ಕೆ  ಖರ್ಚಾಗಿಲ್ಲ ಎಂದರೆ ಸರಿಯಲ್ಲ. ಅಪಘಾತ ಮೃತನ  ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಆಗಿದ್ದು, 3 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಕಾಲಮಿತಿ ಮೀರಿ ಅರ್ಜಿಸಲ್ಲಿಸಿದ ಕಾರಣ ನಾವು ಯಾವುದೇ ಪರಿಹಾರ ಪಡೆಯಲು ಹಕ್ಕುದಾರರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.